ಶ್ರೀ ಕೆ. ಹೆಚ್. ಹನುಮೇಗೌಡ : ಈಗ ಏನೋ ಬಹಳ ಸ್ಟ್ರಿಕ್ಟ್ ಆಗಿ ಆಕ್ಷನ್ ತೆಗೆದುಕೊಳ್ಳುವ ಹಾಗೆ ಹೇಳಿದ್ದೀರಿ ನಿಜವಾಗಿ ಆಕ್ಷನ್ ತೆಗೆದುಕೊಳ್ಳುತ್ತೀರಾ? ಏಕೆಂದರೆ ಕೋ-ಆಪರೇಟೀವ್ ಸೊಸೈಟಿಗೆ ತಿಂಗಳಿಗೆ ಹನ್ನೆರಡೂವರೆ ಸಾವಿರ ರೂಪಾಯಿಗಳ ಬಾಡಿಗೆ ಬರುವ ವ್ಯವಸ್ಥೆ ಇದ್ದು ಬಾಡಿಗೆ ಬರುತ್ತಿತ್ತು. ಆ ಬಾಡಿಗೆಯನ್ನು ಕೂಡ ವಸೂಲಿ ಮಾಡಿಲ್ಲ. ರೈತರಿಗೆ ಗೊಬ್ಬರ ಕೊಡುವ ವ್ಯವಸ್ಥೆ ಇತ್ತು ಅದು ನಿಂತುಹೋಯಿತು. ಸುಮಾರು 200 ರಿಂದ 300 ಕಾರ್ಡುದಾರರು ಇದ್ದು ಅವರಿಗೆ ಸೀಮೆಎಣ್ಣೆ ವಿತರಣೆ ಮಾಡುವ ವ್ಯವಸ್ಥೆ ಇದ್ದದ್ದು ನಿಂತುಹೋಗಿದೆ. ಕನ್ಸೂಮರ್ ಸೆಕ್ಷನ್ ಇತ್ತು ಅದು ಸಹ ನಿಂತುಹೋಯಿತು. ಹೀಗೆ ಎಲ್ಲವೂ ನಿಂತುಹೋದರೂ ಕೂಡ ಸಂಬಳಸಾರಿಗೆಯನ್ನು ಅದೇ ರೀತಿ ಕೊಟ್ಟುಕೊಂಡು ಬಂದಿದ್ದಾರೆ. ಏಕೆ ಹೀಗಾಯಿತು? ಸುಮಾರು ಎರಡೂವರೆ ಲಕ್ಷ ರೂಪಾಯಿಗಳನ್ನು ಬಾಡಿಗೆ ಬಾಕಿ ನಿಂತಿದೆ. ಆಗಾಗ್ಗೆ ಸೊಸೈಟಿಯ ಲೆಕ್ಕಪತ್ರಗಳನ್ನು ಚೆಕ್ ಮಾಡುವ ವ್ಯವಸ್ಥೆ ಇದ್ದಿದ್ದರೆ ಈ ರೀತಿ ಅನ್ಯಾಯ ಆಗದ ಹಾಗೆ ತಡೆದಿದ್ದರೆ ಆ ಸೊಸೈಟಿಯನ್ನು ಉಳಿಸಿಕೊಳ್ಳುವುದಕ್ಕೆ ಆಗುತ್ತಿರಲಿಲ್ಲವೇ? ಕರ್ತವ್ಯಲೋಪವನ್ನು ಎಲ್ಲಾ ಅಧಿಕಾರಿಗಳು ಮಾಡಿದ್ದಾರೆ. ನಾಲ್ಕು ಲಕ್ಷ ರೂಪಾಯಿಗಳ ಅವ್ಯವಹಾರ ಮಾಡಿದಂಥ ಸೆಕ್ರೆಟರಿಗೆ ಬಡ್ತಿ ಕೊಟ್ಟು ಕೋ-ಆಪರೇಟೀವ್ ಡಿಪಾರ್ಟ್‌ಮೆಂಟಗೆ ಅಥವಾ ಆರ್ಗನೈಜೇಷನ್‌ಗತ ಹಾಕಿದ್ದೀರಲ್ಲವೇ? ಅವನ್ನು ನಿಮ್ಮ ಬೆಂಗಳೂರಿನ ಕಚೇರಿಗೆ ತೆಗೆದುಕೊಳ್ಳುತ್ತೀರಾ? ನಿಮ್ಮ ಕಚೇರಿಗೆ ಅಥವಾ ರಿಜಿಸ್ಟ್ರಾರ್‌ರವರ ಕಚೇರಿಗಾದರೂ ತೆಗೆದುಕೊಳ್ಳಿ. ಏಕೆಂದರೆ ಹಣ ಹೊಡೆಯುವುದಕ್ಕೆ, ನುಂಗುವುದಕ್ಕೆ, ನಂತರ ಬಚಾವಾಗುವುದಕ್ಕೆ ಬಹಳ ಎಕ್ಸ್‌ಪರ್ಟ್ ಆಗಿದ್ದಾನೆ. ಇಷ್ಟು ಸಲ ಅವನು ಹೇಗೆ ಬಚಾವಾಗಿದ್ದಾನೆ ಎನ್ನುವುದು ನನಗಂತೂ ಅರ್ಥವಾಗುವುದಿಲ್ಲ. ಯಾವ ಆಫೀಸ್‌ಗೆ ಅವನನ್ನು ತೆಗೆದುಕೊಳ್ಳುತ್ತೀರಿ?

ಶ್ರೀ ಡಿ.ಕೆ. ಶಿವಕುಮಾರ್ : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸದಸ್ಯರ ಭಾವನೆ ನನಗೆ ಅರ್ಥವಾಗಿದೆ. ಇದರ ಬಗ್ಗೆ ಸಪರೇಟ್ ಆಗಿ ಮಾಹಿತಿಯನ್ನು ತರಿಸಿ ಯಾವ ರೀತಿ ಕ್ರಮ ತೆಗೆದುಕೊಳ್ಳುವುದಕ್ಕೆ ಸಾಧ್ಯ ಇದೆಯೋ ಆ ರೀತಿ ಖಂಡಿತವಾಗಿ ಮಾಡುತ್ತೇನೆ. ನಮ್ಮ ಅಧಿಕಾರಿಗಳು ಈ ವಿಚಾರದ ಪ್ರತಿಯೊಂದು ಹಂತದಲ್ಲೂ ಆ ಸೊಸೈಟಿಯನ್ನು ಯಾವ ರೀತಿ ರಿವೈವ್ ಮಾಡುವುದಕ್ಕೆ ಸಾಧ್ಯವಿದೆಯೋ ಮತ್ತು ಕಾನೂನಿನ ಚೌಕಟ್ಟಿನಲ್ಲಿ ಯಾವ ರೀತಿ ಇದರ ಬಗ್ಗೆ ಪರಿಶೀಲನೆ ಮಾಡುವುದಕ್ಕೆ ಸಾಧ್ಯವಿದೆಯೋ ಅದನ್ನು ನಾವು ಖಂಡಿತವಾಗಿ ಮಾಡುತ್ತೇನೆ.

(ಆ) ಮೂಡಬಿದ್ರೆ ಹೋಬಳಿಯ ನೊಂದಣಿ ಶುಲ್ಕ, ಮಂಗಳೂರು ತಾಲ್ಲೂಕಿಗೆ ಪಾವತಿಯಾಗದೆ, ಕಾರ್ಕಳ ತಾಲ್ಲೂಕಿಗೆ ಜಮೆಯಾಗುತ್ತಿರುವ ಬಗ್ಗೆ

ಶ್ರೀ ಕೆ. ಅಭಯಚಂದ್ರ (ಮೂಡಬಿದ್ರೆ) : ಮಾನ್ಯ ಉಪಾಧ್ಯಕ್ಷರೆ, ಮೂಡಬಿದ್ರೆ ಹೋಬಳಿಯ ನೊಂದಣಿ ಶುಲ್ಕ ಮಂಗಳೂರು ತಾಲ್ಲೂಕಿಗೆ ಪಾವತಿಯಾಗದೇ ಕಾರ್ಕಳ ತಾಲ್ಲೂಕಿಗೆ ಜಮೆ ಆಗುತ್ತಿದೆ. ಇದರಿಂದ ಮೂಡಬಿದ್ರೆ ಹೋಬಳಿಯ ಅಭಿವೃದ್ಧಿ ಕಾಮಗಾರಿಗೆ ಧಕ್ಕೆ ಆಗಿದೆ. ಈ ಬಗ್ಗೆ ಮಾನ್ಯ ಕಂದಾಯ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಹೆಚ್. ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು) : ಮಾನ್ಯ ಉಪಾಧ್ಯಾಕ್ಷರೆ, ಮೂಡಬಿದ್ರೆ

ಹೋಬಳಿಯ ನೊಂದಣಿ ಶುಲ್ಕವನ್ನು ಮಂಗಳೂರು ತಾಲ್ಲೂಕಿಗೆ ಪಾವತಿಯಾಗುವ ಕಾರ್ಕಳ ತಾಲ್ಲೂಕಿಗೆ ಠೇವಣಿಯಾಗುತ್ತಿರುವ ವಿಷಯಕ್ಕೆ ಸಂಬಂಧಿಸಿದಂತೆ ಗಮನ ಸೆಳೆತಯಲಾಗಿದೆ. ನೊಂದಣಿ ಮತ್ತು ಮುದ್ರಾಂಕ ಇಲಾಖೆಯಲ್ಲಿ ನೊಂದಣಿ ಶುಲ್ಕವನ್ನು ಯಾವುದೇ ತಾಲ್ಲೂಕಿಗೆ ಬಿಡುಗಡೆ ಮಾಡಿರುವುದಿಲ್ಲ. ಆದರೆ ಇಲಾಖೆಯಲ್ಲಿ ರಾಜ್ಯಾದ್ಯಂತ ವಸೂಲಿ ಮಾಡುವ ಹೆಚ್ಚುವರಿ ಮುದ್ರಾಂಕ ಶುಲ್ಕವನ್ನು (ಶೇ. 3ರಷ್ಟು) ಕ್ರೋಢೀಕರಿಸಿ, ಆಯಾ ತಾಲ್ಲೂಕಿಗೆ ಜನಸಂಖ್ಯೆ ಆಧಾರದ ಮೇಲೆ ಪ್ರತಿ ತಾಲ್ಲೂಕು ಪಂಚಾಯ್ತಿಗೆ ಹೆಚ್ಚುವರಿ ಮುದ್ರಾಂಕ ಶುಲ್ಕವನ್ನು ರಾಜ್ಯಮಟ್ಟದಲ್ಲಿ ಬಿಡುಗಡೆ ಮಾಡಲಾಗುತ್ತದೆ. ಮೂಡಬಿದ್ರೆ ಹೋಬಳಿಯ ಹೆಚ್ಚುವರಿ ಮುದ್ರಾಂಕ ಶುಲ್ಕವನ್ನು ಮಂಗಳೂರು ತಾಲ್ಲೂಕಿಗೆ ಪಾವತಿ ಮಾಡಲಾಗುತ್ತಿದ್ದು ಕಾರ್ಕಳ ತಾಲ್ಲೂಕಿಗೆ ಪಾವತಿ ಮಾಡಲಾಗುತ್ತಿಲ್ಲ.

ಶ್ರೀ ಕೆ. ಅಭಯಚಂದ್ರ : ಮಾನ್ಯ ಉಪಾಧ್ಯಕ್ಷರೆ, ಹಿಂದೆ ಮೂಡಬಿದ್ರೆ ಹೋಬಳಿ ಕಾರ್ಕಳ ತಾಲ್ಲೂಕಿನಲ್ಲಿ ಇತ್ತು. ಆದರೆ ಜಿಲ್ಲಾ ವಿಂಗಡಣೆ ಆಗುವಾಗ ಮೂಡಬಿದ್ರೆ ಹೋಬಳಿ, ಮಂಗಳೂರು ತಾಲ್ಲೂಕಿಗೆ ಸೇರ್ಪಡೆ ಆಗಿದ್ದರಿಂದಾಗಿ ಸುಮಾರು ಎರಡು ವರ್ಷದಿಂದ ಮೂಡಬಿದ್ರೆ ಹೋಬಳಿಗೆ ಸ್ಟ್ಯಾಂಪ್ ಶುಲ್ಕದ ಹಣ ಬರುತ್ತಾ ಇಲ್ಲ. ಮಾನ್ಯ ಕಂದಾಯ ಸಚಿವರು ಅದನ್ನು ಸರಿಪಡಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್.ಸಿ. ಶ್ರೀಕಂಠಯ್ಯ : ಮಾನ್ಯ ಉಪಾಧ್ಯಕ್ಷರೆ, ಅಲ್ಲಿ ಸರಿಯಾಗಿಯೇ ಇದೆ. ಸರಿಪಡಿಸುವುದು ಏನೂ ಇಲ್ಲ. ಮಾನ್ಯ ಸದಸ್ಯರು ಹೇಳಿದ ಹಾಗೆ ಕಾರ್ಕಳ ತಾಲ್ಲೂಕಿಗೆ ಈ ಹಣ ಪಾವತಿಯಾಗಿಲ್ಲ. ಅಲ್ಲಿ ಯಾವ ರೀತಿ ಹಣವನ್ನು ಪಾವತಿ ಮಾಡುತ್ತಿದ್ದೇವೆ ಎನ್ನತಕ್ಕಂಥದ್ದನ್ನು ಈ ಹೇಳಿಕೆಯಲ್ಲಿ ತಿಳಿಸಿದ್ದೇನೆ.

6. ನಿಯಮ 69ರ ಮೇರೆಗೆ

ವಿಷಯ : ರಾಜ್ಯದಲ್ಲಿ ವಾಣಿಜ್ಯ ಬೆಳೆಗಳೂ ಸೇರಿದಂತೆ ಎಲ್ಲಾ ವ್ಯವಸಾಯೋತ್ಪನ್ನ ಬೆಳೆಗಳ ಬೆಲೆ ಕುಸಿದಿದ್ದು, ಹತಾಶರಾದ ರೈತರು ಆತ್ಮಹತ್ಯೆಯ ಹಾದಿ ಹಿಡಿದಿರುವ ಬಗ್ಗೆ ಮುಂದುವರೆದ ಚರ್ಚೆ

+ ಶ್ರೀ ಸಿ.ಗುರುಸ್ವಾಮಿ (ಚಾಮರಾಜನಗರ) : ಮಾನ್ಯ ಉಪಾಧ್ಯಕ್ಷರೆ, ನಿಯಮ 69ರ ಕೆಳಗಡೆ ರೈತರಿಗೆ ಇರತಕ್ಕಂಥ ಸಮಸ್ಯೆ ಬಗ್ಗೆ, ಅವರು ಬೆಳೆದಂಥ ಜೋಳ, ರಾಗಿ ಮತ್ತು ಹೊಗೆಸೊಪ್ಪು ಇನ್ನಿತರ ಪದಾರ್ಥಗಳ ಬೆಲೆ ಕುಸಿದು ಸಂಕಷ್ಟದಲ್ಲಿರತಕ್ಕಂಥ ಸಂದರ್ಭದಲ್ಲಿ ಈ ಸದನದಲ್ಲಿ ಬಹಳ ಗಂಭೀರವಾಗಿ ಚರ್ಚೆ ನಡೆಯುತ್ತಿರತಕ್ಕಂಥದ್ದನ್ನು ನಾವೆಲ್ಲರೂ ನೋಡುತ್ತಿದ್ದೇವೆ. ಈ 21ನೇ ಶತಮಾನ ಈ ರಾಜ್ಯದ ರೈತರಿಗೆ ಶಾಪವಾಗಿ ಪರಿಣಮಿಸಿದೆ ಎಂದು ನಾನಾದರೂ ಕೂಡ ಹೇಳುವುದಕ್ಕೆ ಇಷ್ಟಪಡುತ್ತೇನೆ. ಈ ಬೆಲೆಗಳ ಕುಸಿತದಿಂದಾಗಿ ರಾಜ್ಯದ ರೈತರುಗಳು ಅಷ್ಟೇ ಅಲ್ಲ ಈ ರೈತರ ವ್ಯವಸಾಯವನ್ನೇ ಅವಲಂಬಿಸಿರತಕ್ಕಂಥ ಕೂಲಿಕಾರ್ಮಿಕರು ಕೂಡ ಸಂಕಷ್ಟಕ್ಕೆ ಈಡಾಗಿರತಕ್ಕಂಥ ಪರಿಸ್ಥಿತಿ ಬಂದಿದೆ. ರೈತರು ಬೆಳೆದಂಥ ಬೆಳೆಗಳಿಗೆ ಸಮರ್ಪಕವಾದಂಥ ಬೆಲೆ